(ಸದನವು ಪುನಃ 3-15 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಉಪಾಧ್ಯಕ್ಷಿಣಿಯವರು : ಮಾನ್ಯ ಪ್ರಭಾಕರ್ ರಾಣೆಯವರ ಪ್ರಶ್ನೆ ಪಿ.ಡಬ್ಲ್ಯೂ.ಡಿ. ಗೆ ಟ್ರಾನ್ಸ್‌ಫರ್ ಆಗಿದೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಅದು ಮುಂದಿನ ವಾರದಲ್ಲಿ ಬರುತ್ತದೆ.

ಬಯಲುನಾಡು ಅಭಿವೃದ್ಧಿ ಮಂಡಳಿಯ ಸ್ಥಾಪನೆ

1836. ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಅಸ್ತಿತ್ವದಲ್ಲಿರುವಂತೆ ಬಯಲುನಾಡು ಅಭಿವೃದ್ಧಿ ಮಂಡಳಿ ರಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಚಿತ್ರದುರ್ಗ, ತುಮಕೂರು, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಂತೆ ಬಯಲುನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಸ್ತಾವನೆಯು ಸರ್ಕಾರದಲ್ಲಿ ಈಗ ಯಾವ ಹಂತದಲ್ಲಿದೆ?

ಇ) ಹಾಗಿದ್ದರೆ, ಅದರ ಮುಂದಿನ ರೂಪುರೇಷಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷಿಣಿಯವರೆ, ನಾನು ಕೇಳಿರತಕ್ಕಂಥ ಪ್ರಶ್ನೆಯನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗಳು ಅಸ್ತಿತ್ವದಲ್ಲಿರುವಂತೆ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸುವ ಬಗ್ಗೆ ಸರಕಾರದಲ್ಲಿ ಪ್ರಸ್ತಾವನೆಯು ಇದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ. ಹಾಗೆಯೇ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಂತೆ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸುವ ಪ್ರಸ್ತಾವನೆಯು ಸರಕಾರದಲ್ಲಿ ಈಗ ಯಾವ ಹಂತದಲ್ಲಿ ಇದೆ ಎಂದು ಕೇಳಿದ್ದಕ್ಕೆ 'ಉದ್ಭವಿಸುವುದಿಲ್ಲ' ಎಂದು ಉತ್ತರಿಸಿದ್ದಾರೆ. ಈಗ ಬಯಲುಸೀಮೆ ಪ್ರದೇಶವಾಗಿರತಕ್ಕಂಥ ಚಿತ್ರದುರ್ಗ, ತುಮಕೂರು, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ರಸ್ತೆಯ ಪರಿಸ್ಥಿತಿಯು ಹೇಗೆ ಇದೆ ಎಂಬುದನ್ನು ನಮ್ಮ ಜಿಲ್ಲೆಯಿಂದ ಒಂದಂಥ ತಾವುಗಳು ಕೂಡ ಅರಿತುಕೊಂಡಿದ್ದೀರಿ. ಹಾಗಿದ್ದಲ್ಲಿ ಈ ಮಲತಾಯಿ ಧೋರಣೆಯು ಏತಕ್ಕಾಗಿ? ಈಗ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಹಣವನ್ನು ಕೊಡುತ್ತಾ

ಇದ್ದಾರೆ. ಮಲೆನಾಡು ಅಭಿವೃದ್ಧಿ ಮಂಡಳಿಗೂ ಕೊಡುತ್ತಾ ಇದ್ದಾರೆ. ಹಾಗೆಯೇ ಯಾವ ಕಾರಣಕ್ಕಾಗಿ ಈ ಒಂದು ಬೋರ್ಡ್‌ನ್ನು ಮಾಡಬಾರದು ಎಂದು ಕೇಳಬಯಸುತ್ತೇನೆ. ಹಾಗೂ ಇದು ಸರಕಾರದ ಪರಿಶೀಲನೆಯಲ್ಲಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೆ, ಇದು ಮಲತಾಯಿ ಧೋರಣೆಯೂ ಅಲ್ಲ, ಬೇರೆ ಏನೂ ಅಲ್ಲ. ಈಗ ಸರಕಾರ ಎರಡು ಬೋರ್ಡ್‌ಗಳನ್ನು ಮಾಡಿ, ಇವುಗಳು ಯಾವತರಹದಲ್ಲಿ ಕೆಲಸ ಮಾಡುತ್ತವೆ ಎಂಬುದನ್ನು ನೋಡುವ ನಿರೀಕ್ಷೆಯಲ್ಲಿದೆ. ಅದಕ್ಕೆ ರೆಗ್ಯೂಲರ್ ಆಗಿ ಪಿಡಬ್ಲ್ಯೂಡಿ ಹಾಗೂ ಜಿಲ್ಲಾಪರಿಷತ್‌ಗಳ ಮೂಲಕ ಹಣವನ್ನು ಒದಗಿಸಿಕೊಡುತ್ತಿದೆ. ಇದು ಅಭಿವೃದ್ಧಿ ಕೆಲಸಗಳನ್ನು ಮಾತ್ರ ಮಾಡುತ್ತಿದೆ. ರಸ್ತೆ ಇತ್ಯಾದಿಗಳ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಸರ್ಕಾರದವರಲ್ಲಿ ಈ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ಮಾಡುವ ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿಲ್ಲ. ಈಗಾಗಲೇ ಮಾಡಿದ ಎರಡು ಬೋರ್ಡ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ತಿಳಿದುಕೊಂಡು ಮುಂದೆ ಬೇಕಾದರೆ ಪ್ರಸ್ತಾವನೆಯನ್ನು ಮಾಡುವ ವಿಚಾರ ಇದೆ.

ಶ್ರೀ ಎ.ವಿ. ಉಮಾಪತಿ : ಇದು ಬರೀ ರಸ್ತೆ ಇತ್ಯಾದಿಗಳನ್ನು ಮಾಡತಕ್ಕಂಥ ಪ್ರಶ್ನೆಯಲ್ಲ. ಈ ನಾಲ್ಕು ಜಿಲ್ಲೆಗಳು ಹಿಂದುಳಿದಿರತಕ್ಕಂಥ ಜಿಲ್ಲೆಗಳಾಗಿವೆ. ಇವುಗಳು ಬರಗಾಲಕ್ಕೆ ತುತ್ತಾಗಿರತಕ್ಕಂಥ ಜಿಲ್ಲೆಗಳಾಗಿವೆ. ಎಲ್ಲಾ ಅಭಿವೃದ್ಧಿ ಕೆಲಸಕಾರ್ಯಗಳು ಇಲ್ಲಿ ಆಗಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಇದಕ್ಕೂ ಕೂಡ ಒಂದು ಮಂಡಳಿಯನ್ನು ರಚಿಸಿಕೊಟ್ಟು ಅವುಗಳ ಅಭಿವೃದ್ಧಿ ಮಾಡುವ ಬಗ್ಗೆ ಯೋಚನೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಚಿವೆಯವರು ಉತ್ತರದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗಳನ್ನು ಮಾಡಿರುವುದಾಗಿ ಹೇಳಿದರು. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆ ಬರತಕ್ಕಂಥ ಪ್ರದೇಶ. ಮಾನ್ಯ ಬಂಗಾರಪ್ಪನವರು ಮಲೆನಾಡು ಪ್ರದೇಶದವರು ಎಂದು ಅವರು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಮಾಡಿದರು. ಮಲೆನಾಡಿನಲ್ಲಿ ಹುಟ್ಟಿದ ಎಲ್ಲಾ ನದಿಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹರಿಯುತ್ತವೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಆ ಭಾಗಕ್ಕೆ ಒಂದು ಮಂಡಳಿಯನ್ನು ಮಾಡಿದರು. ನಮ್ಮ ಬಯಲುಸೀಮೆ ಭಾಗಕ್ಕೆ ಮಳೆಯೂ ಇಲ್ಲ, ನದಿಗಳೂ ಹರಿಯುವುದಿಲ್ಲ ಮತ್ತು ಮುಖ್ಯಮಂತ್ರಿಗಳೂ ಇಲ್ಲ. ಹಾಗಾದರೆ ನಾವುಗಳು ಏಲ್ಲಿಗೆ ಹೋಗಬೇಕು? ನಮಗೆ ಮುಖ್ಯಮಂತ್ರಿಗಳು ಇಲ್ಲದಿದ್ದರೂ ಕೂಡ ತಾವುಗಳು ಇದ್ದೀರಿ ನಮ್ಮ ಕಷ್ಟ ನಿಮಗೆ ಗೊತ್ತೇ ಇದೆ. ಆದ್ದರಿಂದ ದಯವಿಟ್ಟು ಅದೇ ಮಾದರಿಯಲ್ಲಿ ಬಯಲುನಾಡು ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಇದು ಮಲತಾಯಿಧೋರಣೆ ಆಗುತ್ತದೆ. ಅಥವಾ ಇನ್ನಾವುದೇ ರೀತಿಯಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿಯನ್ನು ಮಾಡುತ್ತೀರಿ ಎಂಬ ಬಗ್ಗೆ ಖಚಿತವಾಗಿ ತಿಳಿಸಬೇಕು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಬಂಗಾರಪ್ಪನವರು ಮಲೆನಾಡಿಗೆ ಮಾತ್ರ ಮುಖ್ಯ ಮಂತ್ರಿಯಲ್ಲ. ವೀರೇಂದ್ರ ಪಾಟೀಲರು ಹೈದ್ರಾಬಾದ್ ಕರ್ನಾಟಕ್ಕೆ ಮಾತ್ರ ಮುಖ್ಯಮಂತ್ರಿ ಆಗಿರಲಿಲ್ಲ. ಮುಖ್ಯಮಂತ್ರಿಗಳಾದವರು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳಾಗಿರುತ್ತಾರೆ. ಅವರು

ಯಾವ ಕೆಲಸ ಮಾಡಿದರೂ ಅದು ಮಲತಾಯಿ ಧೋರಣೆ ಮಾಡಿದಂತಲ್ಲ. ತಾವುಗಳು ಸಜೆಶನ್ಸ್ ಕೊಟ್ಟಿದ್ದೀರಿ. ಈಗಾಗಲೇ ಮಾಡಿದ ಬೋರ್ಡ್‌ಗಳು ಯಾವರೀತಿಯಲ್ಲಿ ಕೆಲಸ ಮಾಡುತ್ತವೆ ಎಂಬುದನ್ನು ನೋಡಬೇಕಾಗಿದೆ. ಸ್ಯಾಚುಟರಿ ಬೋರ್ಡ್‌ಗಳಾಗಿ ಅವುಗಳಿಗೆ ಮೆಂಬರ್ಸ್ ಒಂದೂ ಮಾಡಿಲ್ಲ. ಮೊದಲು ಅವುಗಳ ಕೆಲಸ ನೋಡಿಕೊಂಡು ತಾವುಗಳು ಕೊಟ್ಟ ಸೂಚನೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ನಮ್ಮ ತುಮಕೂರು ಚಿತ್ರದುರ್ಗ ಭಾಗಕ್ಕೆ ಜಾಸ್ತಿ ಹಣ ಕೊಟ್ಟುಬಿಡಿ.

ಶ್ರೀ ಕೆ. ಶಿವರಾಮು : ಸಚಿವರು, ಎರಡು ಬೋರ್ಡ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂದು ನೋಡಿಕೊಂಡು ಅನಂತರ ಮೂರನೆಯ ಬೋರ್ಡ್ ಮಾಡುವ ಬಗ್ಗೆ ಯೋಚನೆ ಮಾಡೋಣ ಅಂತ ಹೇಳಿದ್ದಾರೆ. ಹೈದರಾಬಾದ್ ಅಭಿವೃದ್ಧಿ ಮಂಡಳಿ ರಚನೆಯಾದಾಗ ಅದು ಯಾವರೀತಿ ಅನುಷ್ಠಾನಕ್ಕೆ ಬರುತ್ತದೆ ಅಂತ ಪರಿಶೀಲನೆ ಮಾಡುವ ಮೊದಲೇ ಮಲೆನಾಡು ಅಭಿವೃದ್ಧಿ ಮಂಡಳಿ ರಚನೆ ಮಾಡಿದರು. ಈಗ ಡ್ರೈಲ್ಯಾಂಡ್ ಅಭಿವೃದ್ಧಿ ಯೋಜನೆ ಡ್ರೈ ಏರಿಯಾದಲ್ಲಿ ಅರಸೀಕೆರೆ ಹಾಸನದ ಪೂರ್ವಭಾಗ ಮತ್ತು ಚಿತ್ರದುರ್ಗ ಹೀಗೆ ಯಾವ ಜಿಲ್ಲೆಗಳಲ್ಲಿ ಎಲ್ಲಿ ಬರಗಾಲ ಸತತವಾಗಿ ಬರುತ್ತದೆಯೋ ಆ ಏರಿಯಾದಲ್ಲಿ ತಗೊಂಡು ಈಗಾಗಲೇ ಬೇರೆ ರೀತಿಯಲ್ಲಿ ತಗೊಂಡು ಕೆಲಸವನ್ನು ಶುರುಮಾಡಿದ್ದಾರೆ. ಈ ಯೋಜನೆಯನ್ನೂ ಇದರ ಜೊತೆಗೇ ತಗೊಂಡು ಮುಖ್ಯವಾಗಿ ರಸ್ತೆ ಅಭಿವೃದ್ಧಿ ಮಾಡುವುದು ಮುಖ್ಯವಾದ ಪ್ರಶ್ನೆ ಅಲ್ಲ. ಅಲ್ಲಿ ಬರಗಾಲ ಸತತವಾಗಿ ಬಂದು ಏನು ನೀರಾವರಿ ಸೌಲಭ್ಯ ಇಲ್ಲದೇ ಕಡಿಮೆ ಮಳೆಯನ್ನು ಸದುಪಯೋಗಪಡಿಸಿಕೊಳ್ಳಲು ನಾವು ಏನು ಯೋಜನೆ ರೂಪಿಸುತ್ತಿದ್ದೇವೋ, ಆ ಯೋಜನೆಯಲ್ಲಿ ಡ್ರೈಲ್ಯಾಂಡ್ ಅಭಿವೃದ್ಧಿ ಮಂಡಳಿ ಎಂದು ಮಾಡಿ ಕೆಲಸವನ್ನು ತೆಗೆದುಕೊಂಡರೆ ಅಪ್ಪು ಹೇಗೆ ಅನುಷ್ಠಾನಕ್ಕೆ ಬರುತ್ತವೆಯೋ ಅದೇ ರೀತಿ ಇದು ಅನುಷ್ಠಾನಕ್ಕೆ ಬರಲು ಅವಕಾಶವಾಗುತ್ತದೆ ಆ ಭಾಗದ ಜನಕ್ಕೂ ಅನುಕೂಲವಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಆವರು ಸೂಚನೆ ಕೊಟ್ಟಿದ್ದಾರೆ, ಪರಿಶೀಲನೆ ಮಾಡುತ್ತೇನೆ.

ಶ್ರೀ ಎ.ವಿ. ಉಮಾಪತಿ : ಹಾಗಿದ್ದರೆ ಮುಂದಿನ ರೂಪರೇಷೆಗಳೇನು ಎಂದು ಸಚಿವರನ್ನು ಕೇಳಿದ್ದೇನೆ ಅದಕ್ಕೆ ಬೇರೆ ಎರಡು ಬೋರ್ಡ್‌ಗಳನ್ನು ಯಾವರೀತಿ ಮಾಡಿದ್ದಾರೆ ಅದೇ ರೀತಿ ನಮ್ಮ ಜಿಲ್ಲೆಗಳ ಅಭಿವೃದ್ಧಿ ಆಗುವ ಬೋರ್ಡ್‌ನ್ನು ಮಾಡಲು ಕಾರ್ಯೋನ್ಮುಖರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್ ನಾಗರತ್ನಮ್ಮ : ಈಗತಾನೇ ಉತ್ತರ ಹೇಳಿದ್ದೇನೆ, ಆವರು ಸೂಚನೆ ಕೊಟ್ಟಿದ್ದಾರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಶ್ರೀ. ಕಾಳಮರಿಗೌಡರ ಪ್ರಶ್ನೆಗೆ ಸ್ವಲ್ಪ ಕಾಲಾವಕಾಶ ಕೇಳಿದ್ದೇನೆ, ದಯವಿಟ್ಟು ಮುಂದಕ್ಕೆ ಹಾಕಿ.

ಉಪಾಧ್ಯಕ್ಷಿಣಿಯವರು : ಸ್ವಲ್ಪ ಕಾಲಾವಕಾಶ ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್ ಕಾಳಮರಿಗೌಡ : ಆಗಬಹುದು.

ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

1332. ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?